ಮೂಲ ದಾವಾ ಸಂಖ್ಯೆ 76/2020

ಪಿ ಡಬ್ಲ್ಯೂ-1

**(ದಿನಾಂಕ 06.03.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ B.R.G. ವಕೀಲರಿಂದಃ-**

ಸಾಕ್ಷಿ ಹೇಳಲು ನಾನು ಜಿ ಪಿ ಎ ಪಡೆದುಕೊಂಡಿರುವುದಿಲ್ಲಾ ಎಂದರೆ ಸರಿ. ನಾಗಭೂಷಣ ಸ್ವಾಮಿ ಪ್ರಕರಣ ದಾಖಲಿಸಿದ್ದು ನಾನು ಅಪರ್ ಆಫ್ ಅರ್ಟನಿ ಹಾಜರುಪಡಿಸಿರುವುದಿಲ್ಲಾ ಎಂದರೆ ಹಾಜರುಪಡಿಸುತ್ತೇನೆ. ನಿ ಪಿ 7 ಖಾತೆ ನಕಲು 15.06.2019 ರವರೆಗೆ ಮಾತ್ರ ತೋರಿಸಿರುತ್ತೇವೆ ಎಂದರೆ ಸರಿ. 17.01.2020 ಮತ್ತು 03.09.2020 ನಿ ಪಿ 7 ರಲ್ಲಿ ನಮೂದು ಇಲ್ಲಾ ಎಂದರೆ ಸರಿ. ಸಾಕ್ಷಿಗೆ ಈಗ ಒಂದು ದೃಢಿಕೃತ ನಕಲನ್ನು ತೋರಿಸಿದಾಗ ಸಾಕ್ಷಿ ಅದನ್ನು ನೋಡಿ ಸಾಕ್ಷಿ ಅದನ್ನು ಒಪ್ಪಿಕೊಳ್ಳುತ್ತಾರೆ. ಅದರ ದಾಖಲೆಯನ್ನು ನಿ ಡಿ 1 ಎಂದು ಗುರುತಿಸಲಾಯಿತು. ದಿನಾಂಕ 03.09.2020 ರಂದು ಸರ್ಕಾರ ಸಾಲ ಮನ್ನ ಮಾಡಿದ ಕಾರಣ 6,16,653/- ನ್ನು ಖಾತೆಗೆ ಜಮಾ ಮಾಡಿ ಬಾಕಿ ಮೊತ್ತ 0 ಅಂತಾ ತೋರಿಸಿರುತ್ತೇವೆ ಎಂದರೆ ಅದು 22040 ಯಿಂದ 22060 ಗೆ ವರ್ಗಾವಣೆ ಮಾಡಿದ ಬಾಬ್ತು ಎಂಟ್ರಿ ಇದ್ದು ಅದು ನಮ್ಮ ಆಂತರಿಕ ವ್ಯವಸ್ಥೆ ಇರುತ್ತದೆ. 22040 ಅಂದರೆ ಸ್ಟ್ಯಾಂಡರ್ಡ್ ಅಕೌಂಟ್ 22060 ಅಂದರೆ ಸೂಟ್ ಫೈಲ್ಡ್ ಅಕೌಂಟ್ ಇರುತ್ತದೆ. ದಿನಾಂಕ 03.09.2020 ರಂದು ಸರ್ಕಾರ ಸಾಲ ಮನ್ನ ಮಾಡಿದ ಬಗ್ಗೆ ನಾನು ವಾದ ಪತ್ರದಲ್ಲಿ ತಿಳಿಸಿರುವುದಿಲ್ಲಾ ಎಂದರೆ ನಿ ಡಿ 1 ರ ಪ್ರಕಾರ ಸರ್ಕಾರ ಕೇವಲ 25,000/- ರೂ ಪಾವತಿ ಮಾಡಿರುತ್ತದೆ. ದಿನಾಂಕ 11.03.2019 ರಂದು 50 ಸಾವಿರ ರೂ ಟಿ ಎಸ್ ಸಿ ಎಸ್ ಸಿ ಯಿಂದ ಜಮಾ ಆಗಿದೆ ಎಂದರೆ ಸರಿ. ದಿನಾಂಕ 15.06.2019 ರಂದು 1,25,000/- ರೂ ಟಿ ಎಸ್ ಸಿ ಎಸ್ ಸಿ ಯಿಂದ ಜಮಾ ಆಗಿದೆ ಎಂದರೆ ಸರಿ. ದಿನಾಂಕ 17.01.2020 ರಂದು 25 ಸಾವಿರ ರೂ ಟಿ ಎಸ್ ಸಿ ಎಸ್ ಸಿ ಯಿಂದ ಜಮಾ ಆಗಿದೆ ಎಂದರೆ ಸರಿ. ದಿನಾಂಕ 03.09.2020 ರಂದು ರೂ 6,14,653/- ಟಿ ಎಸ್ ಸಿ ಎಸ್ ಸಿ ಯಿಂದ ಜಮಾ

ಆಗಿದೆ ಎಂದರೆ ಸರಿಯಲ್ಲ. ದಿನಾಂಕ 31.032015 ರಂದು 3,321 ರೂ ಬೆಳೆ ನಾಶಕ್ಕಾಗಿ ಕಡಿಮೆ ಮಾಡಿರುತ್ತಾರೆ ಎಂದರೆ ಅದು ಬಡ್ಡಿ ಮೊತ್ತ ಇರುತ್ತದೆ. ದಿನಾಂಕ 31.03.2015 ರಂದು 9,547/- ರೂ ಹೆಚ್ಚಿನ ಬಡ್ಡಿ ಪಾವತಿ ಮಾಡಿರುವುದನ್ನು ರಿವರ್ಸ ಮಾಡಿರುತ್ತೇವೆ. ದಿನಾಂಕ 31.03.2016 ರಂದು 50 ಸಾವಿರ ರೂ ಟಿ ಎಸ್ ಸಿ ಎಸ್ ಸಿ ಯಿಂದ ಜಮಾ ಆಗಿದೆ ಎಂದರೆ ಸರಿ. ಮೇಲ್ಕಂಡ ದಿನಾಂಕಗಳನ್ನು ಹಣವನ್ನು ನಾವು ಸರ್ಕಾರ ದಿಂದ ಪಡೆದಿದ್ದರೂ ಸಹ ಅದನ್ನು 10628131008470 ಖಾತೆಯಿಂದ ನಾವು ಪಡೆದುಕೊಂಡಿರುತ್ತೇವೆ ಎಂದರೆ ಸರಿ. ಸದರಿ 8 ದಿನಾಂಕಗಳಿಂದ ಪಡೆದ ಹಣವನ್ನು ಸರಿದೂಗಿಸಿ ವಾದ ಪತ್ರದಲ್ಲಿ ತೋರಿಸಿರುವುದಿಲ್ಲಾ ಎಂದರೆ ಸರಿಯಲ್ಲ. ವಾದ ಪತ್ರ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಸುಳ್ಳು ವಿಚಾರಗಳನ್ನು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ಬ್ಯಾಂಕ್ ವತೀಯಿಂದ ಪವರ್ ಆರ್ಟನಿ ಪಡೆಯದಿರುವ ಕಾರಣ ನನಗೆ ಸಾಕ್ಷಿ ನುಡಿಯಲು ಅಧಿಕಾರ ಇಲ್ಲಾ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.